**ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಕೋಟೆ ಉಪಸ್ಥಿತಿ: ಮುಧೋಳ.**

**ಎಸ್.ಸಿ.ಸಂಖ್ಯೆ: 10022/2025**

| | |
|---|---|
| ಹೆಸರು: | ವಿಷ್ಣು ಹಾವಣಿ @ ಪಾಟೀಲ |
| ತಂದೆಯ ಹೆಸರು: | ರಾಮಪ್ಪ |
| ವಯಸ್ಸು: | 31 ವರ್ಷ |
| ಉದ್ಯೋಗ: | ಒಕ್ಕಲುತನ |
| ವಾಸ: | ಮಲ್ಲಾಪೂರ ಪಿ.ಎಲ್. |

**ಸಾಕ್ಷಿಯನ್ನು ದಿನಾಂಕ: 26.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:-**

**1.** ಚಾಸಾ-1, ಚಾಸಾ-10 ರಿಂದ 12 ಇವರ ಪರಿಚಯವಿದೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯವಿದೆ. ಆರೋಪಿತರು ಹಾಗೂ ಚಾಸಾ-10 ಇವರ ನಡುವೆ ಆದ ಜಗಳವನ್ನು ನಾನು ನೋಡಿಲ್ಲ, ಜಗಳ ಬಿಡಿಸಿಲ್ಲ, ಆ ಬಗ್ಗೆ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಸಮಯದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರು ಪ್ರತಿಕೂಲ ಪ್ರವೃತ್ತಿಯನ್ನು ತೋರುತ್ತಿದ್ದು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು ಅದು ನಿಜವೆಂದು ಕಂಡು ಬಂದಿದ್ದರಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)

**ಪಾಟಿಸವಾಲು: ಸರ್ಕಾರಿ ಅಭಿಯೋಜಕರಿಂದ:-**

**1.** ದಿ: 30.01.2023 ರಂದು ರಾತ್ರಿ 11-00 ಗಂಟೆಗೆ ನಾನು ನಮ್ಮ ಜಮೀನಿನಲ್ಲಿ ಇರುವಾಗ ಚಾಸಾ-1 ಇವರ ಜಮೀನಿನಲ್ಲಿ ಗಲಾಟೆ ಆಗುವುದನ್ನು ಕೇಳಿ ಹೋಗಿ ನೋಡಿದಾಗ ಚಾಸಾ-10 ಇವನಿಗೆ ಯಾರೋ ಹೊಡೆಯುತ್ತಿದ್ದರು, ನಾವು ಹತ್ತಿರ ಹೋಗಿ ನೋಡಿದಾಗ ಈಗ ನ್ಯಾಯಾಲಯದ ಮುಂದಿರುವ ಆರೋಪಿತರು ಕೂಡಿಕೊಂಡು ಕೈಯಲ್ಲಿ ಕೊಯ್ತಾ, ಬಡಿಗೆ, ಕಲ್ಲು, ಕಬ್ಬಿಣದ ರಾಡಗಳನ್ನು ಹಿಡಿದುಕೊಂಡು ಬಂದು ಚಾಸಾ-10 ಇವನಿಗೆ ಹೊಡೆಯುತ್ತಿದ್ದರು ಎಂದರೆ ಸರಿಯಲ್ಲ.

**2.** ಆಗ ನಾನು, ಚಾಸಾ-1 , 11, 13 ರವರು ಸೇರಿ ಜಗಳ ಬಿಡಿಸಿದೆವು ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಈಗ ಓದಿ ಹೇಳಲಾದ ರೀತಿಯಲ್ಲಿ ಅಂದರೆ " ನಿನ್ನೆ

ದಿನಾಂಕ: **30.01.2023** ರಂದು ………. ನಾನೂ ಕೂಡ ಹಾಜರಿದ್ದೆ" ಅಂತ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. (ಸದರಿ ಹೇಳಿಕೆಯನ್ನು ನಿಪಿ-**29** ಅಂತ ಗುರುತಿಸಲಾಯಿತು).

**4.** ಜಗಳವನ್ನು ಪ್ರತ್ಯಕ್ಷ್ಯವಾಗಿ ಕಂಡು, ಜಗಳ ಬಿಡಿಸಿ, ನಿಪಿ-**29** ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲು: ಆರೋಪಿ ಪರ ವಕೀಲರಿಂದ: ಇಲ್ಲ.**

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**